ಓ ಎಸ್ : 210/2017 ಪಿ. ಡಬ್ಲ್ಯೂ 1

ಸಾಕ್ಷಿಯನ್ನು ದಿಃ **27.03.2019** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ. ಎಸ್.ಪಿ.ಎಸ್ ಯವರಿಂದಃ

ಕೃಷ್ಣೇಗೌಡ ತಂದೆ ಗೋವಿಗೌಡರ ನಿಂಜೇಗೌಡ, ವಯಸ್ಸು **68,** ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಾವೆಗೆ ಸಂಬಂಧಪಟ್ಟಂತೆ ದಿಃ **05.03.2013** ರಲ್ಲಿ ಮಾಡಿರುವ ಶುದ್ಧ ಕ್ರಯದ ಕರಾರು ಹಾಜರುಪಡಿಸಿರುತ್ತೇನೆ ಅದನ್ನು ನಿಶಾನೆ ಪಿ **1** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಹಿ ಯನ್ನು ನಿಪಿ **1** ಎ ಎಂದು ಗುರುತಿಸಲಾಯಿತು, ಸದರಿ ಪತ್ರದಲ್ಲಿ ಪ್ರತಿವಾದಿಯು ಸಹಿ ಮಾಡಿದ್ದು ಅದನ್ನು ನಿಪಿ **1** ಬಿ ಎಂದು ಗುರುತಿಸಲಾಯಿತು, ಸಾಕ್ಷಿ **1** ರಲ್ಲಿ ರಘು ಅವರ ಸಹಿ ಮಾಡಿದ್ದು ಅದನ್ನು ನಿಪಿ **1** ಸಿ ಎಂದು ಗುರುತಿಸಲಾಯಿತು, ಸದರಿ ಕರಾರಿಗೆ **2** ನೇ ಸಾಕ್ಷಿಯಾಗಿ ನಂಜುಂಡಸ್ವಾಮಿ ಅವರು ಸಹಿ ಮಾಡಿದ್ದು ಅದನ್ನು ನಿಪಿ **1** ಡಿ ಎಂದು ಗುರುತಿಸಲಾಯಿತು, ಸದರಿ ದಾಖಲೆಗೆ ಪತ್ರ ಬರಹರಾಗಿ ಅನಂತೇಗೌಡರವರು ಸಹಿ ಮಾಡಿರುತ್ತಾರೆ , ಅದನ್ನು ನಿಪಿ **1** ಇ ಎಂದು ಗುರುತಿಸಲಾಯಿತು, ಈ ದಾವೆಗೆ ಸಂಬಂಧಪಟ್ಟಂತೆ ಸರ್ವೆ ನಂ. **26/1** ಬಿ ಒಂದು ಆರ್ ಟಿ ಸಿ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ **2** ಎಂದು ಗುರುತಿಸಲಾಯಿತು, ದಿಃ **27.01.2017** ರಂದು ಪ್ರತಿವಾದಿಗೆ ನೀಡಿರುವಂತಹ ಲೀಗಲ್ ನೋಟೀಸಿನ ಕಛೇರಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **3** ಎಂದು ಗುರುತಿಸಲಾಯಿತು, ಅಂಚೆಯ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **4** ಎಂದು ಗುರುತಿಸಲಾಯಿತು, ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **5** ಎಂದು ಗುರುತಿಸಲಾಯಿತು, ದಿಃ **06.02.2017** ರಂದು ಪ್ರತಿವಾದಿಯವರು ನೀಡಿರುವ ರಿಪ್ಲೆ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ **6** ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ಆರ್ ಎಂ ವಕೀಲು ರವರು ಪಾಟೀಸವಾಲಿಗೆ ಕಾಲವಕಾಶ ಕೋರಿದ ಮೇರೆಗೆ ಕಾಲವಕಾಶವನ್ನು ನೀಡಲಾಯಿತು.

ಓಹೇ ಕೇಸಃಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ

ನ್ಯಾಯಾಲಯ, ತಿ.ನರಸಿಪುರ